**ಫಲಿತಾಂಶ ಪರಿಷ್ಕರಣೆ**

ವಿದ್ಯಾರ್ಥಿಯು ಇಂದಕ್ಕಿಂತ ಹೆಚ್ಚಿನ ಪ್ರಯತ್ನಗಳಲ್ಲಿ ಉತ್ತೀರ್ಣನಾಗಿದ್ದು ,ಎಲ್ಲಾ ಪ್ರಯತ್ನಗಳಲ್ಲಿ ಗಳಿಸಿದ ಅಂಕಗಳನ್ನು ಕ್ರೋಢೀಕರಿಸಿ ಮಂಡಳಿಯ ಉತ್ತೀರ್ಣತಾ ನಿಯಮದನ್ವಯ ಫಲಿತಾಂಶ ಘೋಷಣೆ ಮಾಡುವುದನ್ನು "ಫಲಿತಾಂಶ ಪರಿಷ್ಕರಣೆ " ಎಂದು ಕರೆಯಲಾಗಿದೆ.

**"ಫಲಿತಾಂಶ ಪರಿಷ್ಕರಣೆ " ಏಕೆ ಮಾಡಬೇಕು :**

2003 ಕ್ಕಿಂತ ಹಿಂದಿನ ವರ್ಷಗಳ ಅಂಕಗಳನ್ನು ಮಂಡಳಿ ಗಣಕೀಕರಿಸಿರುವುದಿಲ್ಲ. ಆದ್ದರಿಂದ ಅಂತಿಮವಾಗಿ ಎಲ್ಲಾ ವಿಷಯಗಳನ್ನು ಪಾಸು ಮಾಡಿದ ವಿದ್ಯಾರ್ಥಿಯ ಅಂಕಗಳನ್ನು ಕ್ರೋಢೀಕರಿಸಲು ತಂತ್ರಜ್ಞಾನದ ಕೊರತೆ ಇರುವುದರಿಂದ ಅಂತಹ ವಿದ್ಯಾರ್ಥಿಗಳ ಫಲಿತಾಂಶ ಘೋಷಣೆ ಮಾಡಲು ಸಾಧ್ಯವಾಗುವುದಿಲ್ಲ. ಆದ್ದರಿಂದ "ಫಲಿತಾಂಶ ಪರಿಷ್ಕರಣೆ " ಮಾಡಬೇಕು.

**"ಫಲಿತಾಂಶ ಪರಿಷ್ಕರಣೆ " ಹೇಗೆ ಮಾಡಬೇಕು ಹಾಗೂ ಯಾರು ಅರ್ಜಿಸಲ್ಲಿಸಬೇಕು :**

ವಿದ್ಯಾರ್ಥಿಗಳು 2003 ಕ್ಕಿಂತ ಹಿಂದಿನ ವರ್ಷಗಳಲ್ಲಿ ಎಸ್.ಎಸ್.ಎಲ್.ಸಿ ಪರೀಕ್ಷೆ ಬರೆದು ಪ್ರಯತ್ನಗಳಲ್ಲಿ ಉತ್ತೀರ್ಣರಾಗಿದ್ದರೆ. ಅಥವಾ ವಿದ್ಯಾರ್ಥಿಗಳು 2003 ಕ್ಕಿಂತ ಹಿಂದಿನ ವರ್ಷಗಳಲ್ಲಿ ಎಸ್.ಎಸ್.ಎಲ್.ಸಿ ಪರೀಕ್ಷೆ ಬರೆದು ಪ್ರಯತ್ನಗಳಲ್ಲಿ 2003 ನೇ ಇಸವಿಯ ನಂತರದ ದಿನಗಳಲ್ಲಿ ಅಂತಿಮವಾಗಿ ಎಲ್ಲಾ ವಿಷಯಗಳಲ್ಲಿ ಉತ್ತೀರ್ಣರಾಗಿದ್ದರೆ,ಆ ವಿದ್ಯಾರ್ಥಿಯು ಅಂತಿಮವಾಗಿ ಎಲ್ಲಾ ವಿಷಯಗಳಲ್ಲಿ ಉತ್ತೀರ್ಣವಾದ ತಕ್ಷಣ ಫಲಿತಾಂಶ ಪ್ರಕಟಿಸಲು ಆ ವಿದ್ಯಾರ್ಥಿಯು ಹಿಂದೆ ವಿಷಯವಾರು, ಯಾವ ವರ್ಷಗಳಲ್ಲಿ ಪ್ರಥಮವಾಗಿ ಪಾಸಾದ ಚುಕ್ಕಿ ಗುರುತಿಲ್ಲದ ಫಲಿತಾಂಶ ಪಟ್ಟಿಗಳನ್ನು ಶಾಲೆಯ ಮುಖ್ಯಶಿಕ್ಷಕರು ತಮ್ಮ ದೃಢೀಕರಣದೊಂದಿಗೆ ಮಂಡಳಿಗೆ ಸಲ್ಲಿಸಿ ಆ ವಿದ್ಯಾರ್ಥಿಗಳ "ಫಲಿತಾಂಶ ಪರಿಷ್ಕರಣೆ " ಮಾಡಿಸಿಕೊಂಡು ಫಲಿತಾಂಶ ಪಟ್ಟಿ ಹಾಗೂ ಅಂಕಪಟ್ಟಿಯನ್ನು ಮಂಡಳಿಯಿಂದ ತರಿಸಿ ವಿದ್ಯಾರ್ಥಿಗೆ ವಿತರಿಸಲು ಕ್ರಮ ವಹಿಸಬೇಕು.

**ಸೂಚನೆ** ;2003 ರ ನಂತರ ಪ್ರಥಮಬಾರಿಗೆ ಎಸ್.ಎಸ್.ಎಲ್.ಸಿ ಪರೀಕ್ಷೆಗೆ ಹಾಜರಾಗುವ ಯಾವುದೇ ವಿದ್ಯಾರ್ಥಿಗಳು ಫಲಿತಾಂಶ ಪರಿಷ್ಕರಣೆ ವ್ಯಾಪ್ತಿಗೆ ಬರುವುದಿಲ್ಲ. ಮುಖ್ಯಶಿಕ್ಷಕರು ಪುನರಾವರ್ತಿತ ವಿದ್ಯಾರ್ಥಿಗಳು ಪರೀಕ್ಷೆ ತೆಗೆದುಕೊಳ್ಳುವ ಸಂದರ್ಬದಲ್ಲಿಯೇ ಹಿಂದೆ ಪಾಸದ ವಿಷಯಗಳಿಗೆ ಚುಕ್ಕಿಗುರುತಿಲ್ಲದ ಫಲಿತಾಂಶ ಪಟ್ಟಿಗಳನ್ನು ಎಮ್.ಎಸ್.ಎ ಜೊತೆ ಮಂಡಳಿಗೆ ಒದಗಿಸಿದಲ್ಲಿ ನಂತರದ ದಿನಗಳಲ್ಲಿ ಫಲಿತಾಂಶ ಪರಿಷ್ಕರಣೆಗೆ ಪ್ರತ್ಯೇಕವಾಗಿ ಅರ್ಜಿ ಸಲ್ಲಿಸುವ ಅಗತ್ತತೆ ಇರುವುದಿಲ್ಲ.

**ಅರ್ಜಿ ಹಾಗೂ ಶುಲ್ಕ :**

ನಿಗದಿತ ಅರ್ಜಿನಮೂನೆ ಇರುವುದಿಲ್ಲ ಹಾಗೂ ಇದಕ್ಕೆ ಯಾವುದೇ ಶುಲ್ಕ ವಿಧಿಸುವುದಿಲ್ಲ.